# ಸ್ವಾಮಿ ಪವಿತ್ರಾನಂದ (೧೮೯೬-೧೯೭೭)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**



ಸ್ವಾಮಿ ಪವಿತ್ರಾನಂದರರದು ಎತ್ತರದ ತೆಳು ಶರೀರ, ಧೀರ ಸ್ಥಿರ ವ್ಯಕ್ತಿತ್ವ. ಅವರು ಮಿತಭಾಷಿ, ಕರುಣಾಳು ಹಾಗೂ ಹೃದಯವಂತರು. ದೇಹ ಸುದೃಢವೆಂದು ತೋರದಿದ್ದರೂ ಮನಸ್ಸು ದೃಢವಾಗಿಯೂ, ಜಾಗೃತವಾಗಿಯೂ ಇತ್ತು. ವಿದ್ವಾಂಸರೂ, ಬುದ್ಧಿವಂತರೂ ಆಗಿದ್ದ ಅವರು ದೀರ್ಘಕಾಲ ಅದ್ವೈತ ಆಶ್ರಮದ ಅಧ್ಯಕ್ಷರೂ, 'ಪ್ರಬುದ್ಧ ಭಾರತ'ದ ಸಂಪಾದಕರೂ ಆಗಿದ್ದರು. ಬಾಹ್ಯ ನೋಟಕ್ಕೆ ಅದ್ವೈತಿಗಳಂತೆ ತೋರುತ್ತಿದ್ದರೂ, ಅಂತರಂಗವು ಭಕ್ತಿಯಿಂದ ತುಂಬಿತ್ತು. ೧೯೧೭ರಲ್ಲಿ ಸ್ವಾಮಿ ಬ್ರಹ್ಮಾನಂದರಿಂದ ಅವರು ಮಂತ್ರದೀಕ್ಷೆಯನ್ನು ಪಡೆದು ೧೯೨೩ರಲ್ಲಿ ಮಹಾಪುರುಷ ಮಹಾರಾಜರಿಂದ ಸಂನ್ಯಾಸದೀಕ್ಷೆಯನ್ನು ಪಡೆದರು. ಅವರು ೧೯೪೭ರಲ್ಲಿ ರಾಮಕೃಷ್ಣ ಮಠ-ಮಿಷನ್ನಿನ ಟ್ರಸ್ಟಿಗಳಾದರು; ನಂತರ ೧೯೫೧ರಲ್ಲಿ ನ್ಯೂಯಾರ್ಕ್ ವೇದಾಂತ ಸೊಸೈಟಿಯ ಅಧ್ಯಕ್ಷರಾದರು. ಅವರು ಇಹಲೋಕವನ್ನು ತ್ಯಜಿಸಿದ್ದು ೧೯೭೭ರಲ್ಲಿ.

೧೯೬೦ರಲ್ಲಿ ನಾನು ಅದ್ವೈತ ಆಶ್ರಮದ ಬ್ರಹ್ಮಚಾರಿಯಾಗಿದ್ದಾಗ ಪವಿತ್ರಾನಂದಜಿಯವರಿಗೆ ಬೇಕಾದ ವಸ್ತುಗಳನ್ನು ಕೊಂಡುಕೊಂಡು ಕಳುಹಿಸುತ್ತಿದ್ದೆ. ೧೯೭೧ರಲ್ಲಿ ನಾನು ಹಾಲಿವುಡ್‌ಗೆ ಹೋದಾಗ ನ್ಯೂಯಾರ್ಕ್‌ನಲ್ಲಿ ನಾಲ್ಕು ದಿನಗಳ ಕಾಲ ಮಹಾರಾಜರೊಂದಿಗಿದ್ದೆ. ನನ್ನನ್ನು ವಿಮಾನ ನಿಲ್ದಾಣದಿಂದ ಆಶ್ರಮಕ್ಕೆ ಕರೆತರಲು ಅವರು ಎರಿಕ್ ಮತ್ತು ಜ್ಯಾಕ್‌ರನ್ನು ಕಳುಹಿಸಿದ್ದರು. ನಂತರ ಅವರು ವ್ಯವಸ್ಥೆ ಮಾಡಿದಂತೆ ಜಾನ್-ಅವರು ನನಗೆ ಅಮೆರಿಕದ ಲಘುಪ್ರವಾಸವನ್ನು ಮಾಡಿಸಿದರು. ಪ್ರತಿಬಾರಿ ಬೇಸಿಗೆಯನ್ನು ಅವರು ಹಾಲಿವುಡ್‌ಗೆ ಬಂದು ಸ್ವಾಮಿ ಪ್ರಭವಾನಂದಜಿಯವರೊಂದಿಗೆ ಕಳೆಯುತ್ತಿದ್ದರು. ಅವರು ನನ್ನ ಪಕ್ಕದ ಕೋಣೆಯಲ್ಲಿರುತ್ತಿದ್ದು, ರಾತ್ರಿ ಭೋಜನಾನಂತರ ತಮ್ಮ ಹಿಂದಿನ ದಿನಗಳ ಸ್ಮರಣೆಯನ್ನು ಹೇಳುತ್ತಿದ್ದರು. ಅವುಗಳಲ್ಲಿ ಕೆಲವು:

## ಸ್ವಾಮಿ ಪವಿತ್ರಾನಂದರ ಸ್ಮೃತಿಗಳು

**೧.೦೭.೧೯೭೧, ಹಾಲಿವುಡ್ :** ನಾನು ಕಲ್ಕತ್ತದ ಅದ್ವೈತ ಆಶ್ರಮದ ಪ್ರಕಾಶನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಮನಸ್ಸು ಚಂಚಲವಾಗಿತ್ತು. ಹಾಗೆಂದು ನಾನು ಮಹಾಪುರುಷ ಮಹಾರಾಜರಿಗೆ ಹೇಳುತ್ತಲೆ ಅವರು, 'ಬೆಳಗ್ಗೆ ಬೇಗನೆ ಎದ್ದು ಸರಿಯಾಗಿ ಜಪ-ಧ್ಯಾನ ಮಾಡು. ಮನಸ್ಸು ಚೆನ್ನಾಗಿರುತ್ತದೆ. ನಾನು ಹಾಗೆಯೇ ಮಾಡುತ್ತೇನೆ. ಬೆಳಗಿನ ಜಾವ ಧ್ಯಾನ ಮಾಡುತ್ತೇನೆ. ಠಾಕೂರರ ಭಾವದಲ್ಲಿ ದಿನವೆಲ್ಲ ಕಳೆದುಹೋಗುತ್ತದೆ' ಎಂದರು. 'ಬೆಳಗಿನ ಜಾವ ಬೇಗನೆ ಏಳು ವುದನ್ನು ಅನೇಕ ಸಲ ಪ್ರಯತ್ನಿಸಿರುವೆ, ಆದರೆ ಹಾಗೆ ಮಾಡಿದರೆ ನನ್ನ ತಲೆ ಸುತ್ತುತ್ತದೆ, ನಂತರ ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತದೆ' ಎಂದು ತಿಳಿಸಿದಾಗ ಅವರು ಉದ್ವಿಗ್ನರಾಗಿ, 'ಬೇಡ, ಬೇಡ, ಹಾಗೆ ಮಾಡಬೇಡ. ಚೆನ್ನಾಗಿ ನಿದ್ರೆ ಮಾಡು. ನಿನಗೆ ಸಾಧ್ಯವಾದಷ್ಟು ಜಪ-ಧ್ಯಾನವನ್ನು ಮಾಡು' ಎಂದರು.

ಬಳಿಕ ಮಹಾರಾಜರು ನನಗೆ ಕೆಲವು ಸ್ಫೂರ್ತಿದಾಯಕ ಮಾತುಗಳನ್ನು ಹೇಳಿದರು. 'ಕೆಲವರು ವಿದ್ಯಾರ್ಥಿಗಳು ಸ್ವಲ್ಪವೇ ಓದಿ ಪರೀಕ್ಷೆ ಪಾಸು ಮಾಡುವಂತೆ, ಕೆಲವರು ಕಡಿಮೆ ಪ್ರಯತ್ನದಿಂದ ಭಗವಂತನನ್ನು ಪಡೆಯುತ್ತಾರೆ.'

ನನ್ನನ್ನು 'ಪ್ರಬುದ್ಧ ಭಾರತ'ದ ಸಂಪಾದಕನಾಗಿ ಕಳುಹಿಸಿದಾಗ, ನನ್ನ ಯೋಗ್ಯತೆಯ ಬಗ್ಗೆ ಸಂದೇಹವನ್ನು ವ್ಯಕ್ತಪಡಿಸಿ ಮಹಾಪುರುಷಜಿಯವರಿಗೆ ತಿಳಿಸಿದೆ. ಅವರೆಂದರು, 'ಚೆನ್ನಾಗಿ ಜಪ, ಧ್ಯಾನಗಳನ್ನು ಮಾಡು. ಆಗ ಕೆಲಸವನ್ನೂ ಸರಿಯಾಗಿ ಮಾಡಬಹುದು.' ಅದಲ್ಲದೆ ಯಾವುದೇ ಉಪದೇಶವನ್ನೂ ಅವರು ನನಗೆ ನೀಡಲಿಲ್ಲ.

**೦೨.೦೭.೧೯೭೧, ಟ್ರುಬುಕೊ ಆಶ್ರಮ :** ''ಒಂದು ದಿನ ನಾನು YMCA (Young Men's Christian Association) ಯ ಕಾರ್ಯದರ್ಶಿಯವರನ್ನು ಕರೆದುಕೊಂಡು ಬೇಲೂರು ಮಠದಲ್ಲಿ ಮಹಾಪುರುಷ ಮಹಾರಾಜರ ಬಳಿಸಾರಿದೆ.

**ಕಾರ್ಯದರ್ಶಿ:** ಜಗತ್ತಿನಲ್ಲಿ ಇಷ್ಟೊಂದು ದುಃಖ ಏಕಿದೆ?

**ಮಹಾಪುರುಷ ಮಹಾರಾಜ್:** ನನಗೆ ಗೊತ್ತಿಲ್ಲ. ಆದರೆ ಅದನ್ನು ಹೇಗೆ ಹೋಗಲಾಡಿಸಬೇಕು ಎಂದು ನನಗೆ ಗೊತ್ತಿದೆ.

**ಕಾರ್ಯದರ್ಶಿ:** ನಾನು ಕ್ರೈಸ್ತರನ್ನು ಕೇಳುತ್ತೇನೆ, ''ನೀವು ದೇವರನ್ನು ನೋಡಿದ್ದೀರಾ?'' ಎಂದು. ಅವರ ಉತ್ತರ, ''ಹೌದು'' ಎಂದು. ಅದೇ ಪ್ರಶ್ನೆಯನ್ನು ನಾನು ಹಿಂದೂಗಳಿಗೆ ಹಾಕಿದರೆ ಅವರು, ''ಇಲ್ಲ'' ಎಂದು ಉತ್ತರಿಸುತ್ತಾರೆ. ಇದರಿಂದ, ಕ್ರಿಸ್ತರ ಮಾರ್ಗವೇ ಸಾಕ್ಷಾತ್ಕಾರಕ್ಕೆ ಅತ್ಯುತ್ತಮವೆಂದು ಪ್ರಮಾಣಿತವಾಗುವುದಿಲ್ಲವೆ?

**ಮಹಾಪುರುಷ ಮಹಾರಾಜ್:** ನನಗೆ ಗೊತ್ತಿಲ್ಲ.

**ಕಾರ್ಯದರ್ಶಿ:** ನೀವು ದೇವರನ್ನು ಕಂಡಿದ್ದೀರಾ?

**ಮಹಾಪುರುಷ ಮಹಾರಾಜ್:** ಹೌದು, ನಾನು ದೇವರನ್ನು ಕಂಡಿದ್ದೇನೆ. ಆದರೆ ನನಗೆ ಭಗವಂತನ ಇತಿಮಿತಿ ಎಷ್ಟೆಂದು ತಿಳಿದಿಲ್ಲ. ನಮ್ಮ ಒಂದು ಉಪನಿಷತ್ತು ಹೇಳುತ್ತದೆ, 'ಯಾರು ನನಗೆ ತಿಳಿದಿದೆ ಎನ್ನುತ್ತಾನೋ ಅವನಿಗೆ ತಿಳಿದಿಲ್ಲ. ಯಾರು ತಿಳಿದಿಲ್ಲ ಎನ್ನುತ್ತಾನೋ ಅವನಿಗೆ ತಿಳಿದಿರುತ್ತದೆ.'

**೧೩-೦೭-೧೯೭೨, ಹಾಲಿವುಡ್ :** ನಾನು ಹರಿ ಮಹಾರಾಜರೊಡನೆ ಬಹಳ ವಾದ ಮಾಡುತ್ತಿದ್ದೆ. ಅವರು ನನ್ನನ್ನು ತುಂಬ ಪ್ರೀತಿಸುತ್ತಿದ್ದರು. ಒಂದು ದಿನ ಹರಿ ಮಹಾರಾಜರು ನನ್ನನ್ನು, ''ನಿನಗೇನು ಬೇಕು?'' ಎಂದು ಕೇಳಿದರು. ನಾನೆಂದೆ, ''ಮಹಾರಾಜ್, ನನಗೇನು ಬೇಕೆಂಬುದು ನನಗೆ ತಿಳಿದಿಲ್ಲ; ಆದರೆ ಏನು ಬೇಡವೆಂದು ತಿಳಿದಿದೆ.''

ನಂತರ ಹರಿ ಮಹಾರಾಜರು ನನಗೆಂದರು, ''ನಿನ್ನ ನೆರಳಿನೊಂದಿಗೆ ನೀನು ಯುದ್ಧ ಮಾಡಬೇಡ. ಅದು ಅತ್ಯಂತ ಅಸ್ಥಿರ ವಸ್ತುವಾಗಿದೆ.''

ನನ್ನ ಮನಸ್ಸಿನಲ್ಲಿ ಆಗ ಶೇಕ್ಸ್‌ಪಿಯರ್‌ನ 'ಮ್ಯಾಕ್‌ಬೆತ್'ನಲ್ಲಿ ವರ್ಣಿಸಿದಂತಹ ಅಗ್ನಿಜ್ವಾಲೆಯು ಉರಿಯುತ್ತಿತ್ತು. ಹರಿ ಮಹಾರಾಜರ ಈ ಮಾತುಗಳನ್ನು ಕೇಳಿ ನನ್ನ ಮನಸ್ಸು ಶಾಂತವಾಯಿತು.

**೧೧.೦೭.೧೯೭೪ ಹಾಲಿವುಡ್:**

**ಸ್ವಾಮಿ ಪವಿತ್ರಾನಂದ:** ಮಹಾರಾಜ್, ಠಾಕೂರರ ಕೆಲಸ ಮಾಡುತ್ತಿದ್ದೇನೆಂಬ ಭಾವನೆ ಬರುತ್ತಿಲ್ಲವಲ್ಲ?

**ಸ್ವಾಮಿ ಶಾರದಾನಂದ:** ನೀನು ನಿನ್ನ ತಂದೆ-ತಾಯಿಯವರಿಗಾಗಿ ಕೆಲಸ ಮಾಡುತ್ತಿರುವೆಯಾ?

**ಸ್ವಾಮಿ ಪವಿತ್ರಾನಂದ:** ಇಲ್ಲ.

**ಸ್ವಾಮಿ ಶಾರದಾನಂದ:** ಇಲ್ಲಿ ಕೆಲಸಮಾಡಿ ಹಣ-ಸಂಪಾದಿಸುತ್ತಿರುವೆಯಾ?

**ಸ್ವಾಮಿ ಪವಿತ್ರಾನಂದ:** ಇಲ್ಲ.

**ಸ್ವಾಮಿ ಶಾರದಾನಂದ:** ನಿನ್ನ ಸ್ವಾರ್ಥಕ್ಕಾಗಿ ಮಾಡುತ್ತಿಲ್ಲವೆಂಬ ಭಾವನೆ ಹೊಂದಿರುವೆ ತಾನೆ?

**ಸ್ವಾಮಿ ಪವಿತ್ರಾನಂದ:** ಹ್ಞಂ, ಹಾಗೆ ಅನ್ನಿಸುತ್ತಿದೆ. ನೀವು ಕೆಲಸ ಮಾಡಲು ಹೇಳುತ್ತಿರುವಿರಿ, ಆದ್ದರಿಂದ ಮಾಡುತ್ತಿರುವೆ.

**ಸ್ವಾಮಿ ಶಾರದಾನಂದ:** ಈಗ ಅಷ್ಟಾದರೆ ಸಾಕು. ಯಾರಿಗಾಗಿ ಕೆಲಸ ಮಾಡುತ್ತಿರುವೆಯೆಂದು ಮುಂದೆ ತಿಳಿಯುತ್ತದೆ.

ದಕ್ಷಿಣ ಭಾರತದಲ್ಲಿ ಭಾಷಣ ಮಾಡಲು ಹಾಗೂ ಇತರ ಕಾರ್ಯಗಳಿಗೆ ನನ್ನನ್ನು ಕಳುಹಿಸಲಾಗಿತ್ತು. ಶರತ್ ಮಹಾರಾಜರಿಗೆ ನಾನೆಂದೆ, ''ನನ್ನಿಂದೇನೂ ಪ್ರಯೋಜನವಿಲ್ಲ. ಆದರೂ ನೀವು ನನ್ನನ್ನು ಕಳುಹಿಸುತ್ತಿರುವಿರಿ.''

ಶರತ್ ಮಹಾರಾಜ್ ಉತ್ತರಿಸಿದರು: ''ನನ್ನಿಂದೇನೂ ಪ್ರಯೋಜನವಿಲ್ಲ' ಎಂಬ ಭಾವವು ಒಳ್ಳೆಯದು. ಈ ಭಾವವು ಬರುವುದು ಶಕ್ತಿಯಿಂದ. 'ನನ್ನಿಂದ ಬಹಳ ಉಪಕಾರವಾಗುತ್ತಿದೆ' ಎಂಬ ಭಾವವು ಅಹಂಕಾರದಿಂದ ಬರುತ್ತದೆ.''

## ಪವಿತ್ರಾನಂದರೊಂದಿಗೆ ಕಳೆದ ದಿನಗಳು

ಸೆಕೆಗಾಲದಲ್ಲಿ ಅನೇಕ ಸಾಧುಗಳು ಪ್ರವಾಸಕ್ಕಾಗಿ ಹಾಲಿವುಡ್‌ಗೆ ಬರುತ್ತಿದ್ದರು. ಸ್ವಾಮಿ ಪ್ರಭವಾನಂದರು ಅವರನ್ನು ಕರೆದುಕೊಂಡು ಮೊದಲು ಲ್ಯಾಂಗುನಾ ಬೀಚ್, ನಂತರ ಮ್ಯಾಲಿವೂ ಬೀಚ್‌ಗೆ ಹೋಗುತ್ತಿದ್ದರು. ಆಗ ಕುಂಭಮೇಳದಂತಹ ಅನುಭವ! ಠಾಕೂರರ ಶಿಷ್ಯಂದಿರ ನೆನಪುಗಳು, ಕಳೆದು ಹೋದ ದಿನಗಳ ಸ್ಮೃತಿಯನ್ನು ಅನೇಕ ಸಾಧುಗಳು ಚರ್ಚಿಸುತ್ತಿದ್ದರು. ಆ ಪ್ರಾಚೀನ ಸಾಧುಗಳ ಜೀವನದಿಂದ ನಾವು ಏನೇನು ಕಲಿಯಬಹುದೆಂಬುದನ್ನು ಭಾವಿಸಿದರೆ ವಿಸ್ಮಯವಾಗುತ್ತದೆ. ಈ ಸ್ಮೃತಿಗಳನ್ನೆಲ್ಲ ರೆಕಾರ್ಡ್ ಮಾಡಿಟ್ಟುಕೊಂಡಿದ್ದರೆ ಅಮೂಲ್ಯ ಸಂಪತ್ತಿನ ರಕ್ಷಣೆ ಮಾಡಿದಂತಾಗುತ್ತಿತ್ತು. ಹೊಸ ಬ್ರಹ್ಮಚಾರಿಗಳು ಇವುಗಳಿಂದ ಲಾಭವನ್ನು ಪಡೆಯಬಹುದಿತ್ತು. ನಾನು ಕೆಲವು ಅಂಶಗಳನ್ನು ಬರೆದಿಟ್ಟುಕೊಳ್ಳುತ್ತಿದ್ದೆ.


ಒಂದು ದಿನ ಪವಿತ್ರಾನಂದರು ನನಗೆಂದರು, ''ನೋಡು, ನೀನು ಭಾಷಣ ಮಾಡುವಾಗ ಠಾಕೂರ್-ಸ್ವಾಮೀಜಿಯವರ ಉಪದೇಶಗಳನ್ನು ವರ್ಣರಂಜಿತವಾಗಿ ವಿವರಿಸಬೇಡ. ಅತಿಶಯೋಕ್ತಿಗಳನ್ನು ಉಪಯೋಗಿಸಿ ಮಾತನಾಡಬೇಡ. ಹಾಗೆ

ಮಾಡಿದರೆ ಸತ್ಯದಿಂದ ಬಿದ್ದುಹೋಗುವೆ.'' ಈ ನುಡಿಗಳು ನನ್ನ ಮೇಲೆ ಪ್ರಭಾವ ಬೀರಿದ್ದವು. ಭೂತೇಶಾನಂದಜಿ ಕೂಡ ನನಗೆ ಹೇಳಿದ್ದರು, ''ಉಪನ್ಯಾಸ ನೀಡುವಾಗ ತರತಮ ಭಾಷೆಯನ್ನು ಬಳಸಬೇಡ. ಉದಾಹರಣೆಗೆ, 'ಅವರು ಅತಿಶ್ರೇಷ್ಠ', 'ಅವರು ಅತ್ಯುನ್ನತ ಹಂತದವರು' ಇತ್ಯಾದಿ. ಅವರು ಅತಿಶ್ರೇಷ್ಠರು ಎಂಬುದನ್ನು ನೀನು ಹೇಗೆ ತಿಳಿದಿರುವೆ?'' ಠಾಕೂರ್-ಸ್ವಾಮೀಜಿಯವರ ಜೀವನದ ಘಟನೆಗಳೊಂದಿಗೆ ಭಾಷಣಕಾರರು ತಮ್ಮ ಸ್ವಂತ ಚಿಂತನೆಗಳನ್ನೂ ಸೇರಿಸಿ ಸಭೆ-ಸಮಿತಿಗಳಲ್ಲಿ ಹೊಸತನವನ್ನು ನೀಡಿ ಮಾತನಾಡುವುದನ್ನು ಇತ್ತೀಚೆಗೆ ಕಾಣುತ್ತೇವೆ. ಆಗ ಪವಿತ್ರಾನಂದಜಿಯವರ ನೆನಪಾಗುತ್ತದೆ.

೧೯೭೧ರಿಂದ ಬೇಸಿಗೆಯ ಐದು ವರ್ಷಗಳನ್ನು ಪವಿತ್ರಾನಂದಜಿಯವರೊಂದಿಗೆ ಕಳೆದಿರುವೆ. ನ್ಯೂಯಾರ್ಕ್‌ಗೆ ಹೋಗುವ ಮುನ್ನ ಅವರು ಉತ್ತಮ ಔತಣವನ್ನು ಏರ್ಪಡಿಸಿದ್ದರು. ೧೯೭೬ರ ಜುಲೈ ೮ರಂದು ಪ್ರಭವಾನಂದರು ತಮ್ಮ ಶರೀರವನ್ನು ತ್ಯಜಿಸುವ ಮುನ್ನ ಅವರು ಹಾಲಿವುಡ್‌ಗೆ ಬಾರದೆ ಬಾಸ್ಟನ್ ಸಮೀಪದ ಮಾರ್‌ಶೀಲ್ಡ್ ರಿಟ್ರೀಟ್‌ಗೆ ಹೋದರು. ನಾನೂ ಹಾಲಿವುಡ್‌ನಿಂದ ಬಂದು ಒಂದು ವಾರದ ತನಕ ಅವರೊಂದಿಗಿದ್ದಾಗ ದಿನಕ್ಕೆ ಮೂರು ಸಲವೂ ಅವರೊಂದಿಗೆ ಆಹಾರವನ್ನು ಸ್ವೀಕರಿಸಿ, ಸುತ್ತಾಡುತ್ತಿದ್ದೆ.

೧೯೭೫ರಲ್ಲಿ ಮಹಾರಾಜರು ಹಾಲಿವುಡ್‌ಗೆ ಬಂದಾಗ ಅವರ ಬಳಿ ಹರಿ ಮಹಾರಾಜರ ಅನೇಕ ಪತ್ರಗಳಿರುವುದಾಗಿ ಹೇಳಿದರು. ನಾನು ಅವುಗಳನ್ನು ಮುದ್ರಿಸುವ ಸಲಹೆ ನೀಡಿದೆ. ಆದರೆ ಅದಕ್ಕವರು ಸುತರಾಂ ಒಪ್ಪಲಿಲ್ಲ. ನಾನು ಹಟ ಹಿಡಿದು ಹೇಳಿದೆ: ''ಹರಿ ಮಹಾರಾಜರ ಆಧ್ಯಾತ್ಮಿಕ ಪತ್ರಗಳು ಈಗ ಸಾರ್ವಜನಿಕ ವಲಯಕ್ಕೆ (public domain) ಬರಬೇಕಾಗಿದೆ.''

ಏನೇ ಆಗಲಿ, ನ್ಯೂಯಾರ್ಕ್‌ಗೆ ಹಿಂದಿರುಗಿ ಅನಾರೋಗ್ಯದಿಂದ ಕಷ್ಟಪಡುತ್ತಿದ್ದ ಮಹಾರಾಜರು ಆಸ್ಪತ್ರೆ ಸೇರಿದರು. ಆಗ ಅವರು ಹರಿ ಮಹಾರಾಜರ ಪತ್ರಗಳನ್ನು ತೆಗೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ಕುಳಿತು, ೧೨ ಪತ್ರಗಳ ಪ್ರತಿ ಮಾಡಿಸಿ 'ಉದ್ಬೋಧನ'ದ ವಿಶ್ವಾಶ್ರಯಾನಂದಜಿಯವರಿಗೆ ಕಳುಹಿಸಿದರು. ಇವುಗಳನ್ನು 'ಉದ್ಬೋಧನ' ಪತ್ರಿಕೆಯಲ್ಲಿ ಮುದ್ರಿಸಲಾಯಿತು. ನಂತರ ಅವು 'ತುರೀಯಾನಂದೇರ್ ಪತ್ರ' ಎಂಬ ಬಂಗಾಳಿ ಪುಸ್ತಕದಲ್ಲಿ ಸ್ಥಾನ ಪಡೆದವು. ಆಸ್ಪತ್ರೆಯಿಂದ ಮರಳಿದ ಮಹಾರಾಜರು ನನಗೆ ಬರೆದರು: 'ನೋಡಪ್ಪಾ, ನೀನು ಹೇಳಿದಂತೆ ನಾನು ಕೇಳಿದ್ದೇನೆ.'' ನನಗೆ ಬಹಳ ಆನಂದವಾಯಿತು. ೧೯೭೭ರ ನವೆಂಬರ್ ತಿಂಗಳಿನಲ್ಲಿ ಅವರು ದೈವಾಧೀನರಾದರು. ✱



## ಮಾವಿನ ಹಣ್ಣಿನ ಉಪದೇಶ

ಒಂದು ಸಲ ಬುದ್ಧನು ತನ್ನ ಶಿಷ್ಯಂದಿರ ಹಾಗೂ ಭಕ್ತರ ನಡುವೆ ಕುಳಿತಿದ್ದನು. ಅವರಲ್ಲಿ ಒಬ್ಬ ಎದ್ದುನಿಂತು ಕೇಳಿದ: ''ಭಗವಾನ್, ನಾವು ನಿಮ್ಮ ಉಪದೇಶ ಕೇಳಲು ತುಂಬ ದೂರದಿಂದ ಬಂದಿದ್ದೇವೆ. ನಮಗೆ ಏನಾದರೂ ಉತ್ತಮ ಉಪದೇಶ ನೀಡಿ.''

ಬುದ್ಧನು ಒಂದು ಚೆನ್ನಾಗಿ ಕಳಿತ ಮಾವಿನ ಹಣ್ಣನ್ನು ಕೈಯಲ್ಲಿ ತೆಗೆದುಕೊಂಡು, ಅದನ್ನು ಎಲ್ಲರಿಗೂ ತೋರಿಸಿ ಪಕ್ಕದಲ್ಲಿ ಇಟ್ಟ. ಸ್ವಲ್ಪ ಹೊತ್ತು ಕಳೆಯಿತು. ಬುದ್ಧನು ಹಾಗೆ ತೋರಿಸಿ ಏನನ್ನು ತಿಳಿಸಿದನೆಂದು ಯಾರಿಗೂ ಗೊತ್ತಾಗಲಿಲ್ಲ. ಅವರೆಲ್ಲ ಮತ್ತೊಮ್ಮೆ ಬುದ್ಧನನ್ನು ವಿನಂತಿಸಿಕೊಂಡರು: ''ದಯವಿಟ್ಟು ನಮಗೆ ಉಪದೇಶ ನೀಡಿ.''

ಮತ್ತೆ ಬುದ್ಧ ಅದೇ ರೀತಿ ಮಾಡಿದ. ಮಾವಿನ ಹಣ್ಣನ್ನು ಎಲ್ಲರಿಗೂ ತೋರಿಸಿ, ಅಲ್ಲೇ ಇಟ್ಟ. ಈ ಬಾರಿ ಕೂಡ ಜನರಿಗೆ ಏನೊಂದೂ ಅರ್ಥವಾಗಲಿಲ್ಲ. ಇದೇ ರೀತಿ ಬುದ್ಧ ಮೂರು-ನಾಲ್ಕು ಬಾರಿ ಮಾಡಿ ತೋರಿಸಿದ. ಜನರಿಗೆ ಏನೂ ತಿಳಿಯದೆ, ಉಪದೇಶ ಮಾಡುವಂತೆ ಕೇಳಿಕೊಂಡರು.

''ನಿಮಗೆ ಮೂರು ಬಾರಿ ಉಪದೇಶ ನೀಡಿದೆ. ಆದರೆ ನಿಮಗೆ ಏನೂ ಅರ್ಥವಾಗಲಿಲ್ಲ'' ಎಂದ ಬುದ್ಧ.

ಜನರು ಬೆರಗಾಗಿ, ''ಸ್ವಾಮಿ, ಅದರ ಅರ್ಥವೇನು ಎಂದು ನೀವೇ ತಿಳಿಸಿಕೊಡಿ'' ಎಂದರು. ಬುದ್ಧ ವಿವರಿಸಿದ: ''ನೋಡಿ, ಮಾವಿನ ಹಣ್ಣು ಸಿಹಿಯಾಗಿರುತ್ತದೆ. ನೀವು ಕೂಡ ಮಾವಿನ ಹಣ್ಣಿನಂತೆ ಒಳಗೆಲ್ಲ ಸಿಹಿಯಾಗಿರಬೇಕು. ಅದೇ ನಿಮಗೆ ನಾನು ಕೊಡುವ ಉಪದೇಶ.''

ಎಲ್ಲರೊಡನೆ ಮಧುರವಾಗಿ ಮಾತನಾಡಿ. ಅಹಂಕಾರ ಅಳಿಸುವಂತೆ ಒಳ್ಳೆಯ ಪದಗಳನ್ನೇ ಬಳಸಿ. ಎಲ್ಲರಿಗೂ ಶಾಂತಿ, ನೆಮ್ಮದಿ ನೀಡುವಂತಹ ಮಾತುಗಳನ್ನೇ ಆಡಿ - ಇದೇ ಮಾವಿನ ಹಣ್ಣಿನ ಉಪದೇಶ.

*(ಸಂಗ್ರಹ)*